# <u>ಸಾಕು ಮಾಡಿರವ್ವ ರಂಗನ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 80.
2. **Note:** This kruti is not available in other standard book that I referred.

ರಾಗ: ಆರಭಿ ತಾಳ: ಆದಿ

ಸಾಕು ಮಾಡಿರವ್ವ ರಂಗನ
ಏಕೆ ದೂರುವಿರೆ ? ॥ ಪ ॥

ಬೆಟ್ಟು ಬಾಯೊಳಗಿಟ್ಟರೆ ರಂಗ – ಕಚ್ಚಲರಿಯನೆ
ಕಟ್ಟಿರುವೆಯನು ಕಂಡರೆ ಬವ್ವೆಂದು – ಚಿಟ್ಟನೆ ಚೀರುವನೆ
ರಟ್ಟೆಯ ಹಿಡಿದು ನಡಸಲು ರಂಗ – ದಟ್ಟಡಿ ಇಕ್ಕುವನೆ
ಭ್ರಷ್ಟ ಮಾತುಗಳನೆಷ್ಟೋ ಕಲ್ಪಿಸಿ
ಪಟ್ಟು ಪಟ್ಟಿಗೆ ರಟ್ಟು ಮಾಡುವುದ ॥ 1 ॥

ಅರಿಯದಂತೆ ನೊರೆಹಾಲನು ಕುಡಿವನೆ – ಕರೆಕರೆ ಮಾಡುವನೆ
ಇರಲು ಮನೆಯೊಳಗೆ ಬರುತ ನಿಮ್ಮ ಮನೆ – ಮೊಸರನು ಸುರಿಯವನೆ
..........................................................................
ಸರಸಿಜಾಕ್ಷಿಯರೆ ಪರಿಪರಿಯಿಂದಲಿ
ಹರಲಿ ಮಾಡುವುದಿದು ತರವೇನಮ್ಮ ॥ 2 ॥

ಚಿಕ್ಕ ಚಿಕ್ಕ ಗೋವಕ್ಕಳ ಕೂಡ ಚೆಂಡನಾಡುವಾಗ
..........................................................................
..........................................................................
ಸಿಕ್ಕಿತೆನುತ ಬಹು ಚಕ್ಕಂದಾಡುತ
ಗಕ್ಕನೆ ಹೋಗಿ ಕೈಯಿಕ್ಕಿ ತೆಗೆದನೆ ॥ 3 ॥

ಮಾಲೆಗಂಬ-ದೋಪಾದಿಯಲಿ ನೀವು ಬಹಳ ಬೆಳೆದಿರೀಗ
ನೀಲಕುಂತಳೆಯೆ ದಧಿ ಶೋಧಿಸಿ ಓಲಾಡುತ ಕಡೆವಾಗ

ಬಾಲಕೃಷ್ಣನಿಗೆ ಜೋಲುವ ಕುಚಗಳು
ನಿಲುಕುವ ಬಗೆ ಹೇಗೆ ?
ಖೂಳ ಸೆಟವಿಯರು ಕಾಳವಾಗಿಹರು
ಕೇಳಿ ಕೇಳಿ ಬೇಸತ್ತಿಹೆನಮ್ಮ      || 4 ||

ಫುಲ್ಲನಾಭನಿವ ಒಲ್ಲದನಾದರೆ ಎಲ್ಲ ಒಯ್ದಿಡ ಬೇಕೆ ?
ಖುಲ್ಲತನದಿ ನೀವ್ ನಿಲ್ಲಗೊಡದಿಹಿರಿ ಗುಲ್ಲುತನವು ಸಾಕೆ
..........................................................................................
ಸಲ್ಲದು ಈ ನುಡಿ ಪುರಂದರ ವಿಠಲಗೆ
ಹಲ್ಲೊಳಗಾತನ ಇಟ್ಟಿರ ಬೇಡಿ      || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದು ಯಶೋದೆಯ ಮಾತು.  ಗೊಲ್ಲಸ್ತ್ರೀಯರಿಗೆ ಸುಳ್ಳು ಮಾತನ್ನು ಹೇಳುವಿರೆಂದು ರೋಸಿ, ಯಶೋದೆ ಮಾತನಾಡುತ್ತಾಳೆ.

**ಪಟ್ಟು ಪಟ್ಟಿಗೆ** = ಬಾರಿಬಾರಿಗೆ

**ಮಾಲಗಂಬ** = ದೀಪಮಾಲೆಯ ಕಂಬ

**ದಧಿ ಶೋಧಿಸಿ** = ಮೊಸರ ಕೆನೆ ತೆಗೆದು

**ಸೆಟವಿ** = ಒಂದು ಕ್ಷುದ್ರ ದೇವತೆ

**ಹಲ್ಲೊಳಗೆ ಇಡು** = ಮೇಲಿಂದ ಮೇಲೆ ಬಯ್ಯು

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, Balakrishna, ranga, bayi, bayyi, halu, mane, gopi, yashode, kai,
**Pravachana:** NA
**Explanation:** NA